**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ .ಎಂ. ಎಫ್. ಸಿ ನ್ಯಾಯಾಲಯ ಸಿಂದಗಿ**

ಸಿ.ಸಿ.ನಂಬರ್ : 266/2024

ಪಿ.ಡಬ್ಲ್ಯೂ : 1 ಸಿ.ಡಬ್ಲ್ಯೂ 1

| | | |
|---|---|---|
| ಸಾಕ್ಷಿದಾರರ ಹೆಸರು | : | ಲಕ್ಷ್ಮೀ |
| ತಂದೆಯ ಹೆಸರು | : | ಶಿವಾನಂದ ದಳವಾಯಿ |
| ವಯಸ್ಸು | : | 30 ವರ್ಷ |
| ಉದ್ಯೋಗ | : | ಕೂಲಿ |
| ವಾಸಸ್ಥಳ | : | ನಿವಾಳಖೇಡ |
| ಸಮಯ | : | 3.45 |

ಸಾಕ್ಷಿಗೆ ಇಂದು ದಿನಾಂಕಃ 05-06-2026 ರಂದು ಪ್ರಮಾಣೀಕರಿಸಲಾಯಿತು.

**ಮುಖ್ಯವಿಚಾರಣೆಃ ಎ.ಪಿ.ಪಿ. ರವರಿಂದ**

ಚಾ ಸಾ 6 ನನ್ನ ಮೈದುನ. ಚಾ ಸಾ 7 ಮತ್ತು 8 ರವರು ನನ್ನ ಮಾವಂದಿರು ಇರುತ್ತಾರೆ. ಚಾ ಸಾ 9 ನನ್ನ ಅಣ್ಣ. ಚಾ ಸಾ 10 ನನ್ನ ತಂದೆ. ಚಾಸಾ 11 ನನ್ನ ಸಹೋದರ. ಚಾ ಸಾ 12 ಪರಿಚಯ ಇಲ್ಲ. ನನ್ನ ಗಂಡನ ಊರು ನಿವಾಳಖೇಡ ಇದ್ದು ನನ್ನ ತವರು ಮನೆ ತಾಂಬಾ ಇರುತ್ತದೆ. ನನ್ನ ಗಂಡನ ಮನೆಯಲ್ಲಿ ನಾನು ನನ್ನ ಅತ್ತೆ ಮಾವ ಮಕ್ಕಳು ಮೈದುನ ಮತ್ತು ನನ್ನ ಗಂಡ ವಾಸಮಾಡುತ್ತಿದ್ದು ಸ್ಧ್ಯ ನನ್ನ ಗಂಡ ಮೃತಪಟ್ಟಿರುತ್ತಾರೆ. ನನ್ನ ಗಂಡ ಕೂಲಿ ಕೆಲಸ ಮಾಡುತ್ತಿದ್ದ. ನನ್ನ ಗಂಡ ದ್ವಿಚಕ್ರ ವಾಹನದ ಮೇಲೆ ಹೋಗಿ ಬಂದು ಮಾಡುತ್ತಿದ್ದರು ಅದರ ನಂಬರ ನನಗೆ ಗೊತ್ತಿಲ್ಲ. ಸದರಿಯವರು ರಸ್ತೆ ಅಪಘಾತದಲ್ಲಿ ಮೃತಪಟ್ಟಿರುತ್ತಾರೆ. ಸದರಿಯವರು ಮೃತಪಟ್ಟು ಸುಮಾರು 3 ವರ್ಷ ಆಗಿರುತ್ತವೆ.

ನಾನು ನಿವಾಳಖೇಡ ನಮ್ಮ ಮನೆಯಲ್ಲಿದ್ದಾಗ ನನ್ನ ಗಂಡನ ಮೊಬೈಲನಿಂದ ಪೋನ್ ಮಾಡಿ ನನ್ನ ಗಂಡನಿಗೆ ಅಪಘಾತವಾಗಿರುವ ವಿಷಯ ತಿಳಿಸಿರುತ್ತಾರೆ. ಸದರಿ ವಿಷಯ ಮನೆಯಲ್ಲಿ ತಿಳಿಸಿ ನಾನು ನನ್ನ ಅತ್ತೆ ಮಾವ ಕರೆದುಕೊಂಡು ಅಪಘಾತವಾದ ಸ್ಥಳಕ್ಕೆ ಹೋಗಿರುತ್ತೇನೆ. ಸ್ಥಳಕ್ಕೆ ಹೋಗಿ ನೋಡಲಾಗಿ ನನ್ನ ಗಂಡನ ತಲೆಗೆ ಪೆಟ್ಟಾಗಿ ಆತ ಮಾತನಾಡುವ ಸ್ಥಿತಿಯಲ್ಲಿದ್ದಿರಲಿಲ್ಲ. ಸ್ಥಳಕ್ಕೆ ಹೊದಾಗ ನಾನು ದುಃಖದಲ್ಲಿದ್ದ ಕಾರಣ ಅಪಘಾತದ ವಿಷಯವಾಗಿ ಸ್ಥಳೀಯರನ್ನು ವಿಚಾರಣೆ ಮಾಡಿಲ್ಲ. ಅಪಘಾತ ಹೇಗೆ ಮತ್ತು ಯಾರು ತಪ್ಪಿನಿಂದ ಆಗಿರುತ್ತೆ ಎಂದು ನನಗೆ ಗೊತ್ತಿಲ್ಲ. ನಂತರ ನನ್ನ ಗಂಡನನ್ನು ಸಿಂದಗಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ನಂತರ ಚಿಕಿತ್ಸೆ ಫಲಕಾರಿಯಾಗದೇ ನನ್ನ ಗಂಡ ಮೃತಪಟ್ಟಿರುತ್ತಾರೆ. ನನ್ನನ್ನು ವಿಚಾರಣೆ ಮಾಡಿ ಪಂಚನಾಮೆ ಮಾಡಿರುತ್ತಾರೆ. ಸಾಕ್ಷಿಗೆ ತಾವು ಇರುವ ಎರಡು ಪೋಟೊಗಳನ್ನು ಅವುಗಳನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿ ತನ್ನ ಸಹಿ ಇರುವ ದಾಖಲಾತಿ ತೋರಿಸಲಾಗಿ ಅದು ನೋಡಿ ಗುರುತಿಸಿದ್ದು ಅದು ದೂರಾಗಿದ್ದು ನಿಪಿ 1 ಎಂದು, ಸಾಕ್ಷಿಯ ಸಹಿ ನಿಪಿ 1 ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ತಾವು ಇರುವ ಎರಡು ಪೋಟೊಗಳನ್ನು ಅವುಗಳನ್ನು ನೋಡಿ ಗುರುತಿಸಿದ್ದು ಅವು ಶವ ಪಂಚನಾಮೆ ಕಾಲಕ್ಕೆ ತೆಗೆದ ಪೋಟೊಗಳಾಗಿದ್ದು ಅವುಗಳನ್ನು ವಕಿಲರ ಸಮ್ಮತಿ ಮೇರೆಗೆ ನಿಪಿ 2 ಮತ್ತು 3 ಎಂದು ಗುರುತಿಸಲಾಯಿತು. ನಂತರದಲ್ಲಿ ಪೋಲಿಸರಿಗೆ ಮರು ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಎ.ಪಿ.ಪಿ. ರವರು ಸಾಕ್ಷಿಯನ್ನು ಭಾಗಶ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೇಳಿರುತ್ತಾರೆ, ಅನುಮತಿ ನೀಡಲಾಯಿತು).**

**ಪಾಟೀಸವಾಲುಃ ಎ.ಪಿ.ಪಿ. ರವರಿಂದಃ**

ನನ್ನ ಗಂಡ ದಿ 18-10-2023 ರಂದು ಕೆಎ/28/ಎಚ್‌ಬಿ/3714 ವಾಹನ ಮೇಲೆ ತಮ್ಮ ತಂದೆಯನ್ನು ನೋಡಿಕೊಂಡು ಬರುವದಾಗಿ ಹೇಳಿ ಹೋಗಿದ್ದು 7.30 ಗಂಟೆ ಸುಮಾರಿಗೆ ನನ್ನ ಗಂಡನ ಮೊಬೈಲನಿಂದ ಫೋನ್ ಮಾಡಿ ಚಿಕ್ಕರೂಗಿ ತಾಂಬಾ ರಸ್ತೆಯ ಮೇಲೆ ಅಡವಿ ಬಸವನ ಗುಡಿಯ ಹತ್ತಿರ ಟ್ರ್ಯಾಕ್ಟರ ಚಾಲಕ ತನ್ನ ವಾಹನ ಅಡ್ಡಾದಿಡ್ಡಿಯಾಗಿ ವೇಗವಾಗಿ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಬೆಳಿಗ್ಗೆ 7 ಗಂಟೆಗೆ ಅಪಘಾತಪಡಿಸಿರುದಾಗಿ ನಾವು ವಿಷಯ ತಿಳಿದು ಸ್ಥಳಕ್ಕೆ ಹೋಗಿ ಸ್ಥಳಿಯರನ್ನು ವಿಚಾರಿಸಿದಾಗ ಗೊತ್ತಾಗಿರುತ್ತದೆ ಎಂದರೆ ಸರಿ. ಅಪಘಾತದ ನಂತರ ಚಾಲಕ ಸ್ಥಳದಿಂದ ಓಡಿ ಹೋಗಿದ್ದು

ದಿನಾಂಕ 10-11-2023 ರಂದು ನಾನು ಪೋಲಿಸರಿಗೆ ನೀಡಿರುವ ಹೇಳಿಕೆ ಏನೆಂದರೆ ನನ್ನ ಗಂಡನಿಗೆ ಅಪಘಾತಪಡಿಸಿದ ಟ್ರ್ಯಾಕ್ಟರ ನಂಬರ ಕೆಎ 28/ಟಿಇ/7134 ವಾಹನ ಹಾಗೂ ಅದರ ಚಾಲಕನನ್ನು ತೋರಿಸಿ ಆತನ ಹೆಸರು ಸಾಹೇಬಗೌಡ ಹಣಮಂತ ಕೊಡೆಕಲ ಎಂದು ತಿಳಿಸಿದ್ದು ಈ ವಿಷಯವಾಗಿ ಪುನಃ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕಾರಿಸಿದ ಹೇಳಿಕೆ ಭಾಗವನ್ನು ನಿಪಿ 4 ಎಂದು ಗುರುತಿಸಲಾಯಿತು. ನನಗೆ ನಿಪಿ 4ರ ವಿಷಯ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ. ನನಗೆ ನಿಪಿ 1 ಮತ್ತು 4 ರ ಮಾಹಿತಿ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ತೋರಿಸಿ ಆತನ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದರೆ ಸಾಕ್ಷಿ ನಾನು ನೋಡಿಲ್ಲ.

**ಪಾಟೀ ಸವಾಲು ಆರೋಪಿ ಪರ ಶ್ರೀ ಎಮ್ ಬಿ ಎ ವಕೀಲರಿಂದ**

ನಿಪಿ 1 ರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ ಮತ್ತು ಅದನ್ನು ಓದಿ ಸಹ ನನಗೆ ಯಾರು ಹೇಳಿರುವುದಿಲ್ಲ. ಆರೋಪಿ ತನ್ನ ವಾಹನವನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಡಿಕ್ಕಿಪಡಿಸಿದ್ದರಿಂದ ಆಗಿರುತ್ತದೆ ಎಂದು ಗೊತ್ತಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪರಿಹಾರದ ವಿಷಯವಾಗಿ ಪ್ರಕರಣದ ದಾಖಲು ಮಾಡಿದ್ದು ಹಣ ಬಂದಿರುತ್ತದೆ ಎಂದರೆ ಸಾಕ್ಷಿ ಬಂದಿರುತ್ತದೆ ಎಂದು ನುಡಿದಿರುತ್ತಾರೆ. ಪರಿಹಾರದ ಹಣ ಪಡೆಯುವ ಸಲುವಾಗಿ ಸುಳ್ಳು ಪ್ರಕರಣದ ದಾಖಲು ಮಾಡಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ವ
ಜೆ ಎಂ ಎಫ್ ಸಿ, ಸಿಂದಗಿ.